# ರೈತರಿಗಾಗಿ ಪ್ರಜಾತೀರ್ಪು

## ಕೃಷಿ ಸಂಶೋಧನಾ ನೀತಿ ಬದಲಾವಣೆಗೆ ಒತ್ತಾಯ

**ವಿಕ ಸುದ್ದಿಲೋಕ**



ಧಾರವಾಡ : ಕೃಷಿ ಸಂಶೋಧನಾ ನೀತಿಯಲ್ಲಿ ಬದಲಾವಣೆ ತಂದು ರೈತನನ್ನು ಸಂಶೋಧನೆ ಪ್ರವರ್ತಕನ್ನಾಗಿಸಬೇಕು ಎಂಬ ಉದ್ದೇಶದಿಂದ ಡಿಸೆಂಬರನಲ್ಲಿ ಪ್ರಜಾತೀರ್ಪು ಎಂಬ ವಿಶಿಷ್ಟ ಕಾರ್ಯಕ್ರಮ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ ಎಂದು ಹೈದರಾಬಾದ್ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿಯ ನಿರ್ದೇಶಕ ಪಿ.ವಿ. ಸತೀಶ ಹೇಳಿದರು. ಕೃಷಿ ಕ್ಷೇತ್ರದ ಮುನ್ನಡೆಗೆ ತಾನೇ ಕಾರಣ ಎಂದು ಹೇಳಿಕೊಳ್ಳುತ್ತಿರುವ ಸಂಶೋಧನಾ ರಂಗ, ಇದರಲ್ಲಿಯ ವ್ಯತಿರಿಕ್ತ ಪರಿಣಾಮ ಮತ್ತು ಸಮಸ್ಯೆಗಳ ಹೊಣೆ ಹೊತ್ತುಕೊಳ್ಳಲು ಹಿಂಜರಿಯುತ್ತಿದೆ. ಕೃಷಿ ರಂಗವು ಸಂಶೋಧನೆಯ ಮೇಲೆ ನಿಯಂತ್ರಣ ಇಲ್ಲದಿರುವುದೇ ಇಷ್ಟಕ್ಕೆಲ್ಲ ಮುಖ್ಯ ಕಾರಣ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕೈಗಾರಿಕೋದ್ಯಮ ಭಾರತೀಯ ಕೃಷಿ ರಂಗಕ್ಕೆ ಲಗ್ಗೆ ಹಾಕಿದ್ದು, ಹೆಚ್ಚು ಹಣ ಸಿಗುವಲ್ಲಿ ಸಂಶೋಧನೆ ಕೈಗೊಳ್ಳಲಾಗುತ್ತಿದೆ. ಇನ್ನೊಂದೆಡೆ ಈ ವಲಯ ಬಹುರಾಷ್ಟ್ರೀಯ ಕಂಪನಿಗಳ ಪರವಾಗಿ ನಡೆಯುತ್ತಿವೆ. ಹೀಗಾಗಿ ಕೃಷಿ ಸಂಶೋಧನೆ ಜೈವಿಕ ಹಾಗೂ ಕುಲಾಂತರಿ ತಂತ್ರಜ್ಞಾನದತ್ತ ವಾಲುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ವಿವಿಧಕಂಪನಿಗಳುಹಾಗೂಕಾರ್ಪೊರೇಟ್ ಸಂಸ್ಥೆಗಳು ಸ್ವ ಆರ್ಥಿಕ ಅಭಿವೃದ್ಧಿಗಾಗಿ ವಿದೇಶಗಳಲ್ಲಿ ವಿಫಲವಾದ ಕೃಷಿಸಂಶೋಧನೆಗಳನ್ನುಭಾರತದಲ್ಲಿಆರಂಭಿಸಿವೆ. ಏನೋ ದೊಡ್ಡ ಸಾಧನೆ ಮಾಡಿದವು ಎಂಬಂತೆ ಯಾವುದಾದರೊಂದು ಕುಲಾಂತರಿ ತಂತ್ರಜ್ಞಾನ ಬಳಸಿ ರೈತರಿಗೆ ಮೋಸ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

### ರೈತನೇ ತೀರ್ಪುಗಾರನಾಗಬೇಕು

ಬಹುರಾಷ್ಟ್ರೀಯ ಕಂಪನಿಗಳಿಂದ ಮೋಸ ಹೋಗುತ್ತಿರುವ ರೈತ ಹಾಗೂ ಕೃಷಿ ರಂಗವನ್ನು ತಪ್ಪಿಸಲು ಹೈದರಾಬಾದ್ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿಯು ಕೃಷಿ ಮಾಧ್ಯಮ ಕೇಂದ್ರದ ಸಹಭಾಗಿತ್ವದಲ್ಲಿ ಪ್ರಜಾತೀರ್ಪು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ರೈತನೇ ಸಂಶೋಧನೆಯ ತೀರ್ಪುಗಾರನಾಗಬೇಕು ಎಂಬ ಧ್ಯೇಯ ಇಟ್ಟುಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಕೃಷಿ ಸಂಶೋಧನೆಯ ಸಾಧಕ ಮತ್ತು ಬಾಧಕಗಳ ಕುರಿತು ರೈತರೊಂದಿಗೆ ಚರ್ಚಿಸಲು ಈ ಕಾರ್ಯಕ್ರಮ ಸಹಕಾರಿಯಾಗಿದೆ ಎಂದರು.

### ಸಾಧಕ ಕೃಷಿತಂತ್ರಕ್ಕೆ ಸಹಕಾರವಿಲ್ಲ

ಪರಿಸರ ಮತ್ತು ಸಮಾಜಕ್ಕೆ ಸಾಧಕವಾದ ಕೃಷಿ ಪದ್ಧತಿಗೆ ಪ್ರೋತ್ಸಾಹ ನೀಡದ ಸರಕಾರ ಬಾಧಕ ಕೃಷಿ ತಂತ್ರಕ್ಕೆ ಉತ್ತೇಜನ ನೀಡುತ್ತಿದೆ. ಒಂದೇ ಅವಧಿಯಲ್ಲಿ ಮಿಶ್ರ ಬೆಳೆ ಬೆಳೆಯಲು ಆಶಿಸಿದ ರೈತನಿಗೆ ಕಡಿಮೆ ಪ್ರೋತ್ಸಾಹ ನೀಡುವ ಸರಕಾರ ದ್ರಾಕ್ಷಿಯಂತಹ ಬೆಳೆಗಳನ್ನು ಬೆಳೆಯುವ ರೈತನತ್ತ ಹೆಚ್ಚು ಗಮನ ಹರಿಸುತ್ತಿದೆ. ಇದಕ್ಕೆ ಆರ್ಥಿಕ ಸಬಲತೆಯದೆ ಮುಖ್ಯ ಕಾರಣವಾಗಿದೆ ಎಂದರು. ಅನಿತಾ ಪೈಲೂರ, ಪಾಂಡುರಂಗ ಹೆಗಡೆ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

### ಭೂಮಿ ನಿರ್ಲಕ್ಷಿಸಿದರೆ ನಿರ್ನಾಮ...

ಭೂಮಿ, ಕೃಷಿ ರಂಗವನ್ನು ಆಹಾರ ಉತ್ಪಾದನೆ ದೃಷ್ಟಿಯಿಂದ ಮಾತ್ರ ನೋಡುತ್ತಿರುವ ನಾವು ರಾಸಾಯನ ಗೊಬ್ಬರ, ಔಷಧಗಳಂಥ ವಿಷಕಾರಕಗಳನ್ನು ಉಣಿಸಿ ಇಳುವರಿ ವೃದ್ಧಿಸಲು ನೋಡುತ್ತಿದ್ದೇವೆ. ಇದರಿಂದ ಪರಿಸರದಲ್ಲಿ ಏರುಪೇರಾಗಿ ಜಾಗತಿಕ ತಾಪಮಾನ ಹೆಚ್ಚುತ್ತಿದೆ. ಇದೇ ರೀತಿ ಭೂಮಿಯನ್ನು ಫಲ ನೀಡುವ ಗಣಿ ಎಂದು ಪರಿಗಣಿಸಿ ಬಳಸಿಕೊಂಡರೆ ಮುಂದೊಂದು ದಿನ ಭೂಮಿಯೇ ನಿರ್ನಾಮವಾಗುವುದರಲ್ಲಿ ಎರಡು ಮಾತಿಲ್ಲ ಎಂದರು.